# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in


## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ"

**ವಿಷಯ:** ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಇಲ್‌ತೊರೆ ಗ್ರಾಮದ ಸ.ನಂ. 6/1 ರಲ್ಲಿ 0ಎ–39ಗು, 6/2 ರಲ್ಲಿ 0ಎ–39ಗು, 6/3 ರಲ್ಲಿ 1ಎ–38ಗು, 7/1 ರಲ್ಲಿ 0ಎ–36ಗು, 7/2 ರಲ್ಲಿ 1ಎ–04ಗು, 7/3ಎ ರಲ್ಲಿ 2ಎ–23ಗು, 7/3ಬಿ ರಲ್ಲಿ 0ಎ–38ಗು, 8/3 ರಲ್ಲಿ 1ಎ–04ಗು, 9/1 ರಲ್ಲಿ 1ಎ–04ಗು, 10/7(ಹಳೇ ನಂ. 10) ರಲ್ಲಿ 1ಎ–17ಗು, 10/8 ರಲ್ಲಿ 0ಎ–17ಗು, 53/2 ರಲ್ಲಿ 2ಎ–23ಗು, 53/4 ರಲ್ಲಿ 1ಎ–38ಗು, 53/17 (ಹಳೇ ನಂ. 53/2) ರಲ್ಲಿ 1ಎ–00ಗು, 53/20 ರಲ್ಲಿ 0ಎ–06ಗು, 53/21 ರಲ್ಲಿ 1ಎ–07ಗು, 55/3 ರಲ್ಲಿ 1ಎ–00ಗು, 55/4 (ಹಳೇ ನಂ. 55/3) ರಲ್ಲಿ 0ಎ–33ಗು, 55/5 (ಹಳೇ ನಂ 55/3) ರಲ್ಲಿ 1ಎ–00ಗು, 55/6 (ಹಳೇ ನಂ. 55/2) ರಲ್ಲಿ 0ಎ–18ಗು, 57/1 ರಲ್ಲಿ 1ಎ–00ಗು, 57/2 ರಲ್ಲಿ 0ಎ–20ಗು, 57/3 ರಲ್ಲಿ 1ಎ–00ಗು, 58/2 ರಲ್ಲಿ 1ಎ–28ಗು, 58/3 ರಲ್ಲಿ 1ಎ–24ಗು ಮತ್ತು 59/3 ರಲ್ಲಿ 0ಎ–30.08ಗು ಒಟ್ಟು 30ಎ–6.08ಗು ಅಥವಾ 122061.6 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ)ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುವ ಬಗ್ಗೆ.

**ಉಲ್ಲೇಖ:**

1) ಮೆ॥ ಮಾನ್ಯತಾ ಡೆವಲಪರ್ಸ್ ಪ್ರೈ.ಲಿ, ರ ಪರವಾಗಿ ಅಧಿಕೃತ ಸಹಿದಾರರು ಎ.ವೆಂಕಟರಮಣ, ಭೂ ಮಾಲೀಕರು ಹಾಗೂ ಶ್ರೀಮತಿ ಆರ್.ಸುಗುಣ ಬಿನ್ ಸುಬ್ಬಾರಾವ್, ಶ್ರೀ ಪ್ರಭಾಕರ್ ಆರ್ ಬಿನ್ ನಾಗರೆಡ್ಡಿ, ಶ್ರೀ ಮಹೇಂದ್ರ ಮಿಶ್ರ ಬಿನ್ ಲೇ॥ ರಾಮ್‌ದಾರ್ ಮಿಶ್ರ ಭೂ ಮಾಲೀಕರು ಹಾಗೂ ಶ್ರೀಮತಿ ಸೊಣ್ಣಮ್ಮ ಕೋಂ ಲೇ॥ ಬೈರಾಗಿ ಬೈಯಣ್ಣ, ಶ್ರೀ ಮುನಿಯಪ್ಪ ಉರುಫ್ ಅಪ್ಪಯ್ಯ ಬಿನ್ ಲೇ॥ ದೊಡ್ಡಯ್ಯ, ಶ್ರೀ ದ್ವಾರಕೀಶ್ ಬಿನ್ ಮುನಿಯಪ್ಪ ಉರುಫ್ ಅಪ್ಪಯ್ಯ, ಶ್ರೀಮತಿ ಪದ್ಮ ಬಿನ್ ಮುನಿಯಪ್ಪ ಉರುಫ್ ಅಪ್ಪಯ್ಯ, ಚನ್ನಕೇಶವ ಬಿನ್ ಮುನಿಯಪ್ಪ ಅಲಿಯಾಸ್ ಅಪ್ಪಯ್ಯ, ಶ್ರೀ ಹನುಮಪ್ಪ ಬಿನ್ ಲೇ॥ ಬಚ್ಚಣ್ಣ ಭೂ ಮಾಲೀಕರುಗಳ ಪರವಾಗಿ ನೋಂದಾಯಿತ ಜಿ.ಪಿ.ಎದಾರರರು ಮೆ॥ ಮಾನ್ಯತಾ ಡೆವಲಪರ್ಸ್ ಪ್ರೈ ಲಿ ಪರವಾಗಿ ಅಧಿಕೃತ ಸಹಿದಾರರು ಎ.ವೆಂಕಟರಮಣ ರವರುಗಳು ಸಲ್ಲಿಸಿರುವ ಅರ್ಜಿ ಸಂಖ್ಯೆ: 3890, ದಿನಾಂಕ: 09/06/2020.
2) ಸರ್ಕಾರದ ಆದೇಶ ಸಂ. ನಅಇ/273/ಬಿಎಂಆರ್ 2013 ಬೆಂಗಳೂರು ದಿನಾಂಕ: 18/01/2012, ನಅಇ/98/ಬಿಎಂಆರ್ 2013 ಬೆಂಗಳೂರು ದಿನಾಂಕ: 20/03/2013, ನಅಇ/211/ಬಿಎಂಆರ್ 2018 ಬೆಂಗಳೂರು ದಿನಾಂಕ: 05/03/2019 ಮತ್ತು ನಅಇ/212/ಬಿಎಂಆರ್ 2018 ಬೆಂಗಳೂರು ದಿನಾಂಕ: 05/03/2019.
3) ಈ ಪ್ರಾಧಿಕಾರದ ಭೂಉಪಯೋಗ ಬದಲಾವಣೆ ಆದೇಶ ಸಂಖ್ಯೆ: ಬಿಐಎಎಪಿಎ/ಟಿಪಿ 03/ಭೂಉಬ/235/2012–13/809, ದಿ:06/06/2013, ಬಿಐಎಎಪಿಎ/ಟಿಪಿ/ಭೂಉಬ/ 324/2012–13/803, ದಿ:06/06/2013. ಬಿಐಎಎಪಿಎ/ಟಿಪಿ01/ಭೂಉಬ/45/2017–18/812, ದಿ:29/07/2019. ಮತ್ತು ಬಿಐಎಎಪಿಎ/ಟಿಪಿ01/ಭೂಉಬ/24/2018–19/813, ದಿ:29/07/2019 .
4) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಎಲ್‌ಎನ್(ದೇ.ಕು)ಎಸ್‌ಆರ್.80/2013–14, ದಿನಾಂಕ: 29/03/2014 (ಸ.ನಂ 6), ಎಎಲ್‌ಎನ್(ದೇ.ಕು)ಎಸ್‌ಆರ್.25/2013–14, ದಿನಾಂಕ: 19/10/2013 (ಸ.ನಂ 7/1), ಎಎಲ್‌ಎನ್(ದೇ.ಕು)ಎಸ್‌ಆರ್.26/2013–14, ದಿನಾಂಕ: 19/10/2013 (ಸ.ನಂ 7/2), ಅರ್ಜಿ ಸಂ. 139239, ದಿನಾಂಕ: 07/02/2020 (ಸ.ನಂ 7/3ಎ), ಎಲ್‌ಎನ್‌ಡಿಸಿ 10000060, ದಿನಾಂಕ: 19/06/2018 (ಸ.ನಂ 7/3ಬಿ), ಎಎಲ್‌ಎನ್(ದೇ.ಕು) ಎಸ್‌ಆರ್ . 32/2013–14, ದಿನಾಂಕ: 19/10/2013 (ಸ.ನಂ 8/3), ಎಎಲ್‌ಎನ್(ದೇ.ಕು)ಎಸ್‌ಆರ್.

34/2013-14, ದಿನಾಂಕ: 19/10/2013 (ಸ.ನಂ 9/1), ಎಎಲ್‌ಎನ್ (ದೇ.ಕು) ಎಸ್‌ಆರ್. 22/2017-18, ದಿನಾಂಕ: 24/10/2017 (ಸ. ನಂ 10/7 (ಹಳೆ10), ಅರ್ಜಿ ಸಂ. 46856, ದಿನಾಂಕ: 27/11/2019 (ಸ.ನಂ 10/8), ಎಎಲ್‌ಎನ್(ದೇ.ಕು)ಎಸ್‌ಆರ್.34/2014-15, ದಿನಾಂಕ: 21/11/2015 (ಸ.ನಂ 53/2), ಎಎಲ್‌ಎನ್(ದೇ.ಕು)ಎಸ್‌ಆರ್.30/2013-14, ದಿನಾಂಕ: 28/12/2013 (ಸ.ನಂ 53/4), ಎಎಲ್‌ಎನ್(ದೇ.ಕು)ಎಸ್‌ಆರ್.79/2013-14, ದಿನಾಂಕ: 29/03/2014 (ಸ.ನಂ 53/17 (ಹಳೆ 53/2), ಅರ್ಜಿ ಸಂ. 139250, ದಿನಾಂಕ: 07/02/2020 (ಸ.ನಂ 53/20), ಎಎಲ್‌ಎನ್(ದೇ.ಕು)ಎಸ್‌ಆರ್.35/2014-15, ದಿನಾಂಕ: 21/11/2015 (ಸ.ನಂ 53/21 (ಹಳೆ 53/2), ಎಎಲ್‌ಎನ್(ದೇ.ಕು)ಎಸ್‌ಆರ್.105/2013-14, ದಿನಾಂಕ: 07/07/2014 (ಸ.ನಂ 55/3), ಎಎಲ್‌ಎನ್(ದೇ.ಕು)ಎಸ್‌ಆರ್.77/2013-14, ದಿನಾಂಕ: 29/03/2014 (ಸ.ನಂ 55/4 (ಹಳೆ 55/3), ಎಎಲ್‌ಎನ್(ದೇ.ಕು) ಎಸ್‌ಆರ್.106/2013-14, ದಿನಾಂಕ: 25/06/2014 (ಸ. ನಂ. 55/5 (ಹಳೆ 55/3), ಎಎಲ್‌ಎನ್ (ದೇ.ಕು)ಎಸ್‌ಆರ್.108/2013-14, ದಿನಾಂಕ: 25/06/2014 (ಸ.ನಂ 55/6 (ಹಳೆ55/2), ಎಎಲ್‌ಎನ್(ದೇ.ಕು)ಎಸ್‌ಆರ್.20/2013-14, ದಿನಾಂಕ: 29/03/2014 (ಸ.ನಂ 57/1), ಎಎಲ್‌ಎನ್(ದೇ.ಕು)ಎಸ್‌ಆರ್.29/2013-14, ದಿನಾಂಕ: 19/10/2013 (ಸ.ನಂ 57/2), ಎಎಲ್‌ಎನ್(ದೇ.ಕು)ಎಸ್‌ಆರ್.23/2013-14, ದಿನಾಂಕ: 19/10/2013 (ಸ.ನಂ 57/3), ಎಎಲ್‌ಎನ್(ದೇ.ಕು)ಎಸ್‌ಆರ್.03/2015-16, ದಿನಾಂಕ: 22/07/2015 (ಸ.ನಂ 58/2 (ಹಳೆ 58), ಅರ್ಜಿ ಸಂ. 149647, ದಿನಾಂಕ: 27/05/2020 (ಸ.ನಂ 58/3) ಮತ್ತು ಅರ್ಜಿ ಸಂ. 139242, ದಿನಾಂಕ: 07/02/2020 (ಸ.ನಂ 59/3)

5) ದಿನಾಂಕ: 18/06/2020 ರಂದು ನಡೆದ ಪ್ರಾಧಿಕಾರದ 129 ನೇ ಸಭೆಯ ವಿಷಯ ಸಂ. 129.66 ರ ನಡವಳಿಕೆ.
6) ಈ ಪ್ರಾಧಿಕಾರದ ಸಮ ಸಂಖ್ಯೆ ಪತ್ರ ದಿನಾಂಕ: 14/07/2020.
7) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 0010372 ರ ದಿನಾಂಕ: 25/03/2021 ರಂತೆ ರೂ.78,92,270/- (ಎಪ್ಪತ್ತೆಂಟು ಲಕ್ಷದ ತೊಂಭತ್ತೆರಡು ಸಾವಿರದ ಎರಡು ನೂರು ಎಪ್ಪತ್ತು ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.
8) ಅರ್ಜಿದಾರರ ಮನವಿ ಪತ್ರ ದಿನಾಂಕ: 04/01/2022 ಮತ್ತು 06/01/2022.
9) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು ದಿನಾಂಕ: 10/09/2015 ಮತ್ತು ಡಿಪಿಎಎಲ್36ಶಾಸನ 2021, ಬೆಂಗಳೂರು ದಿನಾಂಕ:07/10/2021.

* * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೆ॥ ಮಾನ್ಯತಾ ಡೆವಲಪರ್ಸ್ ಪ್ರೈ.ಲಿ. ರ ಪರವಾಗಿ ಅಧಿಕೃತ ಸಹಿದಾರರು ಎ.ವೆಂಕಟರಮಣ, ಭೂ ಮಾಲೀಕರು ಹಾಗೂ ಶ್ರೀಮತಿ ಆರ್.ಸುಗುಣ ಬಿನ್ ಸುಬ್ಬಾರಾವ್, ಶ್ರೀ ಪ್ರಭಾಕರ್ ಆರ್ ಬಿನ್ ನಾಗರೆಡ್ಡಿ, ಶ್ರೀ ಮಹೇಂದ್ರ ಮಿಶ್ರ ಬಿನ್ ಲೇ॥ ರಾಮ್‌ಬಾರ್ ಮಿಶ್ರ ಭೂ ಮಾಲೀಕರು ಹಾಗೂ (ಶ್ರೀಮತಿ ಸೊಣ್ಣಮ್ಮ ಕೋಂ ಲೇ॥ ಬೈರಾಗಿ ಪ್ಯೆಯಣ್ಣ, ಶ್ರೀ ಮುನಿಯಪ್ಪ ಉರುಫ್ ಅಪ್ಪಯ್ಯ ಬಿನ್ ಲೇ॥ ದೊಡ್ಡಯ್ಯ, ಶ್ರೀ ದ್ವಾರಕೀಶ್ ಬಿನ್ ಮುನಿಯಪ್ಪ ಉರುಫ್ ಅಪ್ಪಯ್ಯ, ಶ್ರೀಮತಿ ಪದ್ಮ ಬಿನ್ ಮುನಿಯಪ್ಪ ಉರುಫ್ ಅಪ್ಪಯ್ಯ, ಚನ್ನಕೇಶವ ಬಿನ್ ಮುನಿಯಪ್ಪ ಅಲಿಯಾಸ್ ಅಪ್ಪಯ್ಯ, ಶ್ರೀ ಹನುಮಪ್ಪ ಬಿನ್ ಲೇ॥ ಬಚ್ಚಣ್ಣ) ಭೂ ಮಾಲೀಕರುಗಳ ಪರವಾಗಿ ನೋಂದಾಯಿತ ಜಿ.ಪಿ.ಎದಾರರು ಮೆ॥ ಮಾನ್ಯತಾ ಡೆವಲಪರ್ಸ್ ಪ್ರೈ ಲಿ ಪರವಾಗಿ ಅಧಿಕೃತ ಸಹಿದಾರರು ಎ.ವೆಂಕಟರಮಣ, ರವರು ಉಲ್ಲೇಖ (1) ರ ಅರ್ಜಿಯಲ್ಲಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಇಲ್‌ತೊರೆ ಗ್ರಾಮದ ಸ.ನಂ. 6/1 ರಲ್ಲಿ 0ಎ-39ಗು, 6/2 ರಲ್ಲಿ 0ಎ-39ಗು, 6/3 ರಲ್ಲಿ 1ಎ-38ಗು, 7/1 ರಲ್ಲಿ 0ಎ-36ಗು, 7/2 ರಲ್ಲಿ 1ಎ-04ಗು, 7/3ಎ ರಲ್ಲಿ 2ಎ-23ಗು, 7/3ಬಿ ರಲ್ಲಿ 0ಎ-38ಗು, 8/3 ರಲ್ಲಿ 1ಎ-04ಗು, 9/1 ರಲ್ಲಿ 1ಎ-04ಗು. 10/7(ಹಳೇ ನಂ. 10) ರಲ್ಲಿ 1ಎ-17ಗು, 10/8 ರಲ್ಲಿ 0ಎ-17ಗು, 53/2 ರಲ್ಲಿ 2ಎ-23ಗು, 53/4 ರಲ್ಲಿ 1ಎ-38ಗು, 53/17 (ಹಳೇ ನಂ. 53/2) ರಲ್ಲಿ 1ಎ-00ಗು, 53/20 ರಲ್ಲಿ 0ಎ-06ಗು, 53/21 ರಲ್ಲಿ 1ಎ-07ಗು, 55/3 ರಲ್ಲಿ 1ಎ-00ಗು, 55/4 (ಹಳೇ ನಂ.

55/3) ರಲ್ಲಿ 0ಎ-33ಗು, 55/5 (ಹಳೇ ನಂ 55/3) ರಲ್ಲಿ 1ಎ-00ಗು, 55/6 (ಹಳೇ ನಂ. 55/2) ರಲ್ಲಿ 0ಎ-18ಗು, 57/1 ರಲ್ಲಿ 1ಎ-00ಗು, 57/2 ರಲ್ಲಿ 0ಎ-20ಗು, 57/3 ರಲ್ಲಿ 1ಎ-00ಗು, 58/2 ರಲ್ಲಿ 1ಎ-28ಗು, 58/3 ರಲ್ಲಿ 1ಎ-24ಗು ಮತ್ತು 59/3 ರಲ್ಲಿ 0ಎ-30.08ಗು ಒಟ್ಟು 30ಎ-6.08ಗು ಅಥವಾ 122061.6 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಲಾಗಿದೆ.

ಪ್ರಶ್ನಿತ ಜಮೀನುಗಳು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ಭೂಉಪಯೋಗ ವಲಯದಲ್ಲಿ ಇರುತ್ತದೆ. ಉಲ್ಲೇಖ (2) ರ ಸರ್ಕಾರದ ಆದೇಶಗಳಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರಡಿಯಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಯಾಗಿರುತ್ತದೆ. ಅದರಂತೆ ಉಲ್ಲೇಖ (3) ರಲ್ಲಿ ಈ ಪ್ರಾಧಿಕಾರದಿಂದ ಭೂಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಆದೇಶ ಪತ್ರಗಳನ್ನು ನೀಡಲಾಗಿರುತ್ತದೆ. ಉಲ್ಲೇಖ (4) ರ ಅಧಿಕೃತ ಜ್ಞಾಪನ ಪತ್ರಗಳಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ.

ಸರ್ಕಾರದ ಅದಿಸೂಚನೆ ಸಂಖ್ಯೆ : ಸಂವ್ಯಶಾಇ24 ಶಾಸನ2015, ದಿನಾಂಕ: 10/09/2015 ರನ್ವಯ ಕಾಯ್ದೆಗೆ ತಿದ್ದುಪಡಿಯಾಗಿರುವಂತೆ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17(2)(ಎ) ರಂತೆ ಸದರಿ ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (5) ರ ದಿನಾಂಕ: 18/06/2020 ರಂದು ನಡೆದ ಪ್ರಾಧಿಕಾರದ 129 ನೇ ಸಭೆಯ ವಿಷಯ ಸಂ. 129.66 ರಲ್ಲಿ ವಿನ್ಯಾಸ ನಕ್ಷೆಯಲ್ಲಿ 'ಬಿ' ಖರಾಬು ಕಾಲುವೆಗೆ ನಿಯಮಾವಳಿಗಳ ಪ್ರಕಾರ ಬಫರ್ ಅಳವಡಿಸಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ವಲಯನಿಯಮಾವಳಿಯಂತೆ ಪಡೆದುಕೊಂಡು, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಇಲ್‌ತೊರೆ ಗ್ರಾಮದ ಸ.ನಂ. 6/1 ರಲ್ಲಿ 0ಎ-39ಗು, 6/2 ರಲ್ಲಿ 0ಎ-39ಗು, 6/3 ರಲ್ಲಿ 1ಎ-38ಗು, 7/1 ರಲ್ಲಿ 0ಎ-36ಗು, 7/2 ರಲ್ಲಿ 1ಎ-04ಗು, 7/3ಎ ರಲ್ಲಿ 2ಎ-23ಗು, 7/3ಬಿ ರಲ್ಲಿ 0ಎ-38ಗು, 8/3 ರಲ್ಲಿ 1ಎ-04ಗು, 9/1 ರಲ್ಲಿ 1ಎ-04ಗು, 10/7(ಹಳೇ ನಂ. 10) ರಲ್ಲಿ 1ಎ-17ಗು, 10/8 ರಲ್ಲಿ 0ಎ-17ಗು, 53/2 ರಲ್ಲಿ 2ಎ-23ಗು, 53/4 ರಲ್ಲಿ 1ಎ-38ಗು, 53/17 (ಹಳೇ ನಂ. 53/2) ರಲ್ಲಿ 1ಎ-00ಗು, 53/20 ರಲ್ಲಿ 0ಎ-06ಗು, 53/21 ರಲ್ಲಿ 1ಎ-07ಗು, 55/3 ರಲ್ಲಿ 1ಎ-00ಗು, 55/4 (ಹಳೇ ನಂ. 55/3) ರಲ್ಲಿ 0ಎ-33ಗು, 55/5 (ಹಳೇ ನಂ 55/3) ರಲ್ಲಿ 1ಎ-00ಗು, 55/6 (ಹಳೇ ನಂ. 55/2) ರಲ್ಲಿ 0ಎ-18ಗು, 57/1 ರಲ್ಲಿ 1ಎ-00ಗು, 57/2 ರಲ್ಲಿ 0ಎ-20ಗು, 57/3 ರಲ್ಲಿ 1ಎ-00ಗು, 58/2 ರಲ್ಲಿ 1ಎ-28ಗು, 58/3 ರಲ್ಲಿ 1ಎ-24ಗು ಮತ್ತು 59/3 ರಲ್ಲಿ 0ಎ-30.08ಗು ಒಟ್ಟು 30ಎ-6.08ಗು ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2)(ಎ)ರ ಅಡಿಯಲ್ಲಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡವಳಿಕೆಯ ರೀತ್ಯ ಸದರಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆಗೆ ಸಂಬಂಧಿಸಿದಂತೆ, ಉಲ್ಲೇಖ (6) ರನ್ವಯ ಈ ಕಛೇರಿಯಿಂದ ಅರ್ಜಿದಾರರಿಗೆ ನಿಗಧಿತ ಶುಲ್ಕಗಳನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ, ಅರ್ಜಿದಾರರು ಉಲ್ಲೇಖ (7) ರಲ್ಲಿ ಈ ಪ್ರಾಧಿಕಾರಕ್ಕೆ ನಿಗಧಿತ ಶುಲ್ಕಗಳನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (8) ರಲ್ಲಿ ಅರ್ಜಿದಾರರುಗಳ ಪೈಕಿ ಮೆ॥ ಮಾನ್ಯತಾ ಡೆವಲಪರ್ಸ್ ಪ್ರೈ.ಲಿ, ಇವರು ಇಲ್‌ತೊರೆ ಗ್ರಾಮದ ಸ.ನಂ. 7/3ಎ ರಲ್ಲಿ 2ಎ-23ಗು ಜಮೀನು ಶ್ರೀ ಪ್ರಭಾಕರ್ ಆರ್ ಬಿನ್ ನಾಗರೆಡ್ಡಿ, 7/3ಬಿ ರಲ್ಲಿ 0ಎ-38ಗು ಜಮೀನು ಶ್ರೀಮತಿ ಸೊಣ್ಣಮ್ಮ ಬಿನ್ ಲೇ॥ ಬೈರಾಗಿ ಬೈಯಣ್ಣ, 59/3 ರಲ್ಲಿ 0ಎ-30.50ಗು ಜಮೀನು ಶ್ರೀ ಚುನುಮಪ್ಪ ಬಿನ್ ಲೇ॥ ಬಚ್ಚಣ್ಣ ಮತ್ತು 53/20 ರಲ್ಲಿ 0ಎ-06ಗು ಜಮೀನು ಶ್ರೀ ಮುನಿಯಪ್ಪ @ ಅಪ್ಪಯ್ಯ ಬಿನ್ ಲೇ॥ ದೊಡ್ಡಯ್ಯ, ಶ್ರೀ ದ್ವಾರಕೀಶ್ ಬಿನ್ ಮುನಿಯಪ್ಪ @ ಅಪ್ಪಯ್ಯ, ಶ್ರೀಮತಿ ಪದ್ಮ ಬಿನ್ ಮುನಿಯಪ್ಪ @ ಅಪ್ಪಯ್ಯ, ಶ್ರೀ ಚನ್ನಕೇಶವ ಬಿನ್ ಮುನಿಯಪ್ಪ @ ಅಪ್ಪಯ್ಯ ಇವರುಗಳಿಂದ ನೋಂದಾಯಿತ ಶುದ್ಧ ಕ್ರಯಪತ್ರದ ಮೂಲಕ ಮಾಲೀಕತ್ವ ಪಡೆದಿರುವ ಬಗ್ಗೆ ದಾಖಲೆಗಳನ್ನು ಹಾಗೂ ವಲಯನಿಯಮಾವಳಿಗಳ ರೀತ್ಯ ವಸತಿ ವಿನ್ಯಾಸದ ನೀಲಿ ನಕ್ಷೆಗಳನ್ನು ಸಲ್ಲಿಸಿ, ಅನುಮೋದನೆ ನೀಡಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂಆರ್/2005 ದಿನಾಂಕ: 27/01/2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29/01/2009 ರಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಗೊಂಡಿರುವ ಮಹಾಯೋಜನೆಯ ವಲಯ ನಿಯಮಾವಳಿಗಳ ಅನುಸಾರ, ಉಲ್ಲೇಖ (5) ರ ಪ್ರಾಧಿಕಾರದ ಸಭೆಯ ನಡವಳಿಕೆಯ ರೀತ್ಯ ಹಾಗೂ ಉಲ್ಲೇಖ (9) ರ ಸರ್ಕಾರದ ಅಧಿಸೂಚನೆಗಳನ್ವಯ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಇಲ್‌ತೊರೆ ಗ್ರಾಮದ ಸ.ನಂ. 6/1 ರಲ್ಲಿ 0ಎ–39ಗು, 6/2 ರಲ್ಲಿ 0ಎ–39ಗು, 6/3 ರಲ್ಲಿ 1ಎ–38ಗು, 7/1 ರಲ್ಲಿ 0ಎ–36ಗು, 7/2 ರಲ್ಲಿ 1ಎ–04ಗು, 7/3ಎ ರಲ್ಲಿ 2ಎ–23ಗು, 7/3ಬಿ ರಲ್ಲಿ 0ಎ–38ಗು, 8/3 ರಲ್ಲಿ 1ಎ–04ಗು, 9/1 ರಲ್ಲಿ 1ಎ–04ಗು, 10/7(ಹಳೇ ನಂ. 10) ರಲ್ಲಿ 1ಎ–17ಗು, 10/8 ರಲ್ಲಿ 0ಎ–17ಗು, 53/2 ರಲ್ಲಿ 2ಎ–23ಗು, 53/4 ರಲ್ಲಿ 1ಎ–38ಗು, 53/17 (ಹಳೇ ನಂ. 53/2) ರಲ್ಲಿ 1ಎ–00ಗು, 53/20 ರಲ್ಲಿ 0ಎ–06ಗು, 53/21 ರಲ್ಲಿ 1ಎ–07ಗು, 55/3 ರಲ್ಲಿ 1ಎ–00ಗು, 55/4 (ಹಳೇ ನಂ. 55/3) ರಲ್ಲಿ 0ಎ–33ಗು, 55/5 (ಹಳೇ ನಂ 55/3) ರಲ್ಲಿ 1ಎ–00ಗು, 55/6 (ಹಳೇ ನಂ. 55/2) ರಲ್ಲಿ 0ಎ–18ಗು, 57/1 ರಲ್ಲಿ 1ಎ–00ಗು, 57/2 ರಲ್ಲಿ 0ಎ–20ಗು, 57/3 ರಲ್ಲಿ 1ಎ–00ಗು, 58/2 ರಲ್ಲಿ 1ಎ–28ಗು, 58/3 ರಲ್ಲಿ 1ಎ–24ಗು ಮತ್ತು 59/3 ರಲ್ಲಿ 0ಎ–30.08ಗು ಒಟ್ಟು 30ಎ–6.08ಗು ಅಥವಾ 122061.6 ಚ.ಮೀ ವಿಸ್ತೀರ್ಣದ ಜಮೀನುಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರನ್ವಯ ವಸತಿ ವಿನ್ಯಾಸ ನಕ್ಷೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ "ತಾತ್ಕಾಲಿಕ ಅನುಮೋದನೆ" ನೀಡಲು ಆದೇಶಿಸಲಾಗಿದೆ.

**ಆದೇಶ ಸಂಖ್ಯೆ : ಬಿಐಎಪಿಎ/ಟಿಪಿ02/ಎಲ್‌ಎಒ/13/2020–21,** 1819. ದಿನಾಂಕ: - 8 FEB 2022

**ಆದೇಶ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2) (ಎ) ರಡಿಯಲ್ಲಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಇಲ್‌ತೊರೆ ಗ್ರಾಮದ ಸ.ನಂ. 6/1 ರಲ್ಲಿ 0ಎ–39ಗು, 6/2 ರಲ್ಲಿ 0ಎ–39ಗು, 6/3 ರಲ್ಲಿ 1ಎ–38ಗು, 7/1 ರಲ್ಲಿ 0ಎ–36ಗು, 7/2 ರಲ್ಲಿ 1ಎ–04ಗು, 7/3ಎ ರಲ್ಲಿ 2ಎ–23ಗು, 7/3ಬಿ ರಲ್ಲಿ 0ಎ–38ಗು, 8/3 ರಲ್ಲಿ 1ಎ–04ಗು, 9/1 ರಲ್ಲಿ 1ಎ–04ಗು, 10/7(ಹಳೇ ನಂ. 10) ರಲ್ಲಿ 1ಎ–17ಗು, 10/8 ರಲ್ಲಿ 0ಎ–17ಗು, 53/2 ರಲ್ಲಿ 2ಎ–23ಗು, 53/4 ರಲ್ಲಿ 1ಎ–38ಗು, 53/17 (ಹಳೇ ನಂ. 53/2) ರಲ್ಲಿ 1ಎ–00ಗು, 53/20 ರಲ್ಲಿ 0ಎ–06ಗು, 53/21 ರಲ್ಲಿ 1ಎ–07ಗು, 55/3 ರಲ್ಲಿ 1ಎ–00ಗು, 55/4 (ಹಳೇ ನಂ. 55/3) ರಲ್ಲಿ 0ಎ–33ಗು, 55/5 (ಹಳೇ ನಂ 55/3) ರಲ್ಲಿ 1ಎ–00ಗು, 55/6 (ಹಳೇ ನಂ. 55/2) ರಲ್ಲಿ 0ಎ–18ಗು, 57/1 ರಲ್ಲಿ 1ಎ–00ಗು, 57/2 ರಲ್ಲಿ 0ಎ–20ಗು, 57/3 ರಲ್ಲಿ 1ಎ–00ಗು, 58/2 ರಲ್ಲಿ 1ಎ–28ಗು, 58/3 ರಲ್ಲಿ 1ಎ–24ಗು ಮತ್ತು 59/3 ರಲ್ಲಿ 0ಎ–30.08ಗು ಒಟ್ಟು 30ಎ–6.08ಗು ಅಥವಾ 122061.6 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಮಟ್ಟ ಮಾಡುವುದು, ನೆಲಗಟ್ಟಿ ಹಾಸುವುದು. ಜಲ್ಲಿಕಲ್ಲನ್ನು ಹಾಸುವುದು, ಕಲ್ಲುಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಗಳನ್ನೊಳಗೊಂಡಂತೆ ನಿವೇಶನಗಳು ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಲಾ ಪ್ರದೇಶ ಮತ್ತು ಯಾವುದೇ ಇತರೆ ಮೂಲ ಸೌಕರ್ಯವನ್ನು ತೋರಿಸಿ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, ವಸತಿ ವಿನ್ಯಾಸ ನಕ್ಷೆಗೆ "ತಾತ್ಕಾಲಿಕ ಅನುಮೋದನೆ" ನೀಡಲಾಗಿದೆ.

1) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ 02 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2) ಪ್ರಾಧಿಕಾರಕ್ಕೆ ಸಮಾಧಾನವಾಗುವಂತೆ ಮಟ್ಟ ಮಾಡುವುದು, ನೆಲಗಟ್ಟು ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲು ಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಯನ್ನೊಳಗೊಂಡಂತೆ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶ ಮತ್ತು ಯಾವುದೇ ಇತರೆ ಮೂಲ ಸೌಕರ್ಯವನ್ನು ತೋರಿಸಿ, ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಅನುಸಾರವಾಗಿ ತಾತ್ಕಾಲಿಕ ಬಡಾವಣೆ ನಕ್ಷೆಗೆ ಮಂಜೂರಾತಿಯನ್ನು ನೀಡಲಾಗಿದೆ.

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in


3) ತಾತ್ಕಾಲಿಕ ಅನುಮೋದನೆ ಆಗಿರುವ ವಸತಿ ವಿನ್ಯಾಸ ನಕ್ಷೆಯ ರೀತ್ಯ ಮಾಲೀಕನು ಯಾವುದೇ ಪರಿಹಾರವನ್ನು ಕ್ಲೇಮು ಮಾಡದೆಯೇ ಉಚಿತವಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ನಾಗರೀಕ ಸೌಲಭ್ಯ ಪ್ರದೇಶವನ್ನು ಈ ಪ್ರಾಧಿಕಾರಕ್ಕೆ ಹಾಗೂ ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಸಾರ್ವಜನಿಕ ಉಪಯೋಗದ ರಸ್ತೆಗಳನ್ನು, ಉದ್ಯಾನಗಳನ್ನು ಹಸ್ತಾಂತರಿಸತಕ್ಕದ್ದು. ನಾಗರೀಕ ಸೌಲಭ್ಯ ನಿವೇಶನ ಮತ್ತು ಉದ್ಯಾನವನ ಪ್ರದೇಶಗಳಿಗೆ Fencing ಅಳವಡಿಸಿ ಸಂರಕ್ಷಿಸತಕ್ಕದ್ದು.

4) ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ, ಮೇಲೆ ಹೇಳಲಾದ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ ಮಂಡಳಿ/ ಇಲಾಖೆಯಿಂದ ಕಾರ್ಯಪೂರ್ತಿ ಪ್ರಮಾಣ ಪತ್ರವನ್ನು ಪಡೆದು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ರಸ್ತೆಗಳು, ಉದ್ಯಾನಗಳನ್ನು ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

5) ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ 02 ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

6) ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ನಿವೇಶನಗಳಲ್ಲಿರುವ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಅಥವಾ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ನೀಡತಕ್ಕದ್ದಲ್ಲ.

7) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

8) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ.

9) ಪ್ರಸ್ತಾವಿತ ಬಡಾವಣೆಯಲ್ಲಿನ ನಿವೇಶನದಾರರಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ಬಡಾವಣೆಯ ಮಾಲೀಕರು ಒದಗಿಸತಕ್ಕದ್ದು.

10) ಪ್ರಶ್ನಿತ ಜಮೀನುಗಳಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

11) ಅರ್ಜಿದಾರರು ಉದ್ದೇಶಿಸಿರುವ ಜಮೀನುಗಳಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

12) ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.

13) ಸದರಿ ವಸತಿ ವಿನ್ಯಾಸದಲ್ಲಿರುವ ಯಾವುದೇ ನಿವೇಶನಗಳನ್ನು ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಯನ್ನು ಮಾಡಬಾರದು.

14) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು.

15) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆ, ರಸ್ತೆಬದಿ ಚರಂಡಿ, ಕಲ್‌ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

16) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ನೀರು ಸರಬರಾಜು ಇಲಾಖೆ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

17) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧಿಕರಣೆ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

18) ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

19) ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

20) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಗಿಡ/ಮರಗಳನ್ನು ಬೆಳಸುವುದು.

21) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದ ಪ್ರದೇಶಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

22) ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

23) ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

24) ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ವಿನ್ಯಾಸಕ್ಕೆ ನೀಡಿರುವ ತಾತ್ಕಾಲಿಕ ಅನುಮೋದನೆ ತಂತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

25) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

26) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು. ಸದರಿ ವಸತಿ ವಿನ್ಯಾಸ ನಕ್ಷೆಯಲ್ಲಿ ಸೂಚಿಸಲಾಗಿರುವ ನಾಲಾ ಪ್ರದೇಶಗಳಲ್ಲಿ ರಸ್ತೆ ಪರಿಚಲನೆಯನ್ನು ಮುಂದುವರಿಸುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು ಕಲ್ವರ್ಟ್ ಕಟ್ಟತಕ್ಕದ್ದು, ಹಾಗೂ ನೀರಿನ ಹರಿವೆಗಾಗಿ ಯಾವುದೇ ಅಡಚಣೆ ಮಾಡತಕ್ಕದ್ದಲ್ಲ, ಹಾಗೂ ಸೂಕ್ತ ಡ್ರೈನೇಜ್ ನಿರ್ಮಿಸಿ ಸಂರಕ್ಷಿಸತಕ್ಕದ್ದು, ಹಾಗೂ ಯಾವುದೇ ಒತ್ತುವರಿ ಮಾಡತಕ್ಕದ್ದಲ್ಲ. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15ಟಿಟಿಪಿ2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ water pumping stations, Walking tracks, Play fields without any building constructions, cycling trucks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

27) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಅರ್ಜಿದಾರರು ವಿನ್ಯಾಸದಲ್ಲಿನ ಕಾಮಗಾರಿಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಿದ ನಂತರ, ಸದರಿ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯುವ ಪೂರ್ವದಲ್ಲಿ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯ ನಿವೇಶನವನ್ನು ಈ ಪ್ರಾಧಿಕಾರಕ್ಕೆ ಹಾಗೂ ಉದ್ಯಾನವನ/ಬಯಲು ಪ್ರದೇಶ ಹಾಗೂ ರಸ್ತೆಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ನೋಂದಾಯಿತ ಪರಿತ್ಯಾಜನಾ ಪತ್ರಗಳ ಮುಖಾಂತರ ಪ್ರತ್ಯೇಕವಾಗಿ ಮುಕ್ಕಟೆಯಾಗಿ ಹಸ್ತಾಂತರಿಸಿ, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ವಿವಿಧ ಇಲಾಖೆಗಳಿಂದ ಅಂದರೆ ನೀರು ಸರಬರಾಜು, ಒಳಚರಂಡಿ ಅಭಿವೃದ್ಧಿಪಡಿಸಿರುವ ಬಗ್ಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ, ರಸ್ತೆ ಕಾಮಗಾರಿಗಳು, ಮಳೆನೀರು ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ, ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ಬೆಸ್ಕಾಂನಿಂದ, ಉದ್ಯಾನವನ/ ಬಯಲುಜಾಗ ಅಭಿವೃದ್ಧಿಪಡಿಸಿರುವ ಬಗ್ಗೆ ತೋಟಗಾರಿಕೆ ಇಲಾಖೆಯಿಂದ, ಹಾಗೂ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಿರುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಪಡೆದ ದೃಢೀಕರಣ ಪತ್ರ ಮತ್ತು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಪ್ರಮಾಣ ಪತ್ರ ಹಾಗೂ ವಿನ್ಯಾಸದಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸಾರ್ವಜನಿಕ ಪ್ರದೇಶಗಳ ನಿರ್ವಹಣೆ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಸಲ್ಲಿಸಿ, ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನಗಳ ಬಿಡುಗಡೆಗೆ ಮನವಿ ಸಲ್ಲಿಸತಕ್ಕದ್ದು.

**ಲಗತ್ತು:–**
ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮಾತ್ರ ನೀಡಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ.

ಸಹಿ/–
**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

**ರವರಿಗೆ,**
**ಮೆ॥ ಮಾನ್ಯತಾ ಡೆವಲಪರ್ಸ್ ಪ್ರೈ.ಲಿ,** ರ ಪರವಾಗಿ
ಅಧಿಕೃತ ಸಹಿದಾರರು ಎ.ವೆಂಕಟರಮಣ, ಶ್ರೀಮತಿ
ಆರ್.ಸುಗುಣ ಬಿನ್ ಸುಬ್ಬಾರಾವ್, ಶ್ರೀ ಮಹೇಂದ್ರ ಮಿಶ್ರ
ಬಿನ್ ಲೇ॥ ರಾಮ್‌ದಾರ್ ಮಿಶ್ರ,
ನಂ. 9/1, ಕ್ಲಾಸಿಕ್ ಕೋರ್ಟ್,
2ನೇ ಹಂತ, ರಿಚ್ ಮಂಡ್ ರಸ್ತೆ,
ಬೆಂಗಳೂರು–560025

**ಪ್ರತಿಯನ್ನು:**

1) **ಭೂದಾಖಲೆಗಳ ಸಹಾಯಕ ನಿರ್ದೇಶಕರು, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ,** ಇವರಿಗೆ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ಪ್ರತಿಯನ್ನು ಕಳುಹಿಸಿದ್ದು, ದೃಢೀಕೃತ ಸರ್ವೆ ನಕ್ಷೆಯನ್ವಯ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆಗಾಗಿ ಪರಿಗಣಿಸಲಾಗಿದ್ದು, ದೃಢೀಕೃತ ಸರ್ವೆ ನಕ್ಷೆಯಂತೆ ಅನುಗುಣವಾಗಿ ಇಲ್ಲದಿದ್ದಲ್ಲಿ ಅಥವಾ ಯಾವುದೇ ಸರ್ಕಾರಿ ಜಮೀನು ಒಳಗೊಂಡಿದ್ದಲ್ಲಿ ಈ ಪ್ರಾಧಿಕಾರಕ್ಕೆ ಮಾಹಿತಿ ನೀಡಲು ಹಾಗೂ ತಾತ್ಕಾಲಿಕ ಅನುಮೋದನೆ ನೀಡಲಾದ ವಸತಿ ವಿನ್ಯಾಸದಂತೆ ಯಾವುದೇ ಕೆರೆ / ಖರಾಬು ಒತ್ತುವರಿ ಆಗಿಲ್ಲದೇ ಇರುವ ಬಗ್ಗೆ ಮಾಹಿತಿ ನೀಡಲು ಕೋರಿದೆ. ತಮ್ಮ ವತಿಯಿಂದ ಯಾವುದೇ ಮಾಹಿತಿ ಸ್ವೀಕೃತಗೊಂಡಿಲ್ಲದ ಪಕ್ಷದಲ್ಲಿ ದಾಖಲೆಯಂತೆ ವಸತಿ ವಿನ್ಯಾಸ ಅನುಮೋದನೆಯು ಸರಿಯಾಗಿರುತ್ತದೆ ಎಂದು ತಿಳಿದು ಮುಂದಿನ ಕ್ರಮಕೈಗೊಳ್ಳಲಾಗುವುದೆಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.
2) **ಉಪನೋಂದಣಾಧಿಕಾರಿಗಳು, ದೇವನಹಳ್ಳಿ ತಾಲ್ಲೂಕು,** ಇವರಿಗೆ ಕಳುಹಿಸುತ್ತಾ ಸದರಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ಮಾತ್ರ ನೀಡಲಾಗಿದ್ದು, ಪ್ರಶ್ನಿತ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆಗೊಳಿಸುವವರೆಗೂ ಸದರಿ ವಸತಿ ವಿನ್ಯಾಸದಲ್ಲಿನ ಯಾವುದೇ ನಿವೇಶನಗಳಿಗೆ ನೋಂದಣಿ ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ.
3) **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕನ್ನಮಂಗಲ ಗ್ರಾಮ ಪಂಚಾಯಿತಿ** ಇವರಿಗೆ ತಾತ್ಕಾಲಿಕ ಅನುಮೋದನೆ ನಕ್ಷೆಯ ಪ್ರತಿಯನ್ನು ಕಳುಹಿಸುತ್ತಾ ಸದರಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ಮಾತ್ರ ನೀಡಲಾಗಿದ್ದು, ಪ್ರಶ್ನಿತ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆಗೊಳಿಸುವವರೆಗೂ ಸದರಿ ವಸತಿ

ವಿನ್ಯಾಸದಲ್ಲಿನ ಯಾವುದೇ ನಿವೇಶನಗಳಿಗೆ ಖಾತಾ ನೋಂದಣಿ ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ.

4) **ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ,** ನಂ. 1/14, 2 ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3 ನೇ ಕ್ರಾಸ್ ಮಿಷನ್ ರಸ್ತೆ, ಬೆಂಗಳೂರು-560027 ಇವರ ಮಾಹಿತಿಗಾಗಿ ಕಳುಹಿಸಿದೆ.

5) **ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ದೇವನಹಳ್ಳಿ ಉಪವಿಭಾಗ** ಇವರಿಗೆ ತಾತ್ಕಾಲಿಕ ಅನುಮೋದನೆ ನಕ್ಷೆಯ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

6) **ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ,** ದೇವನಹಳ್ಳಿ ಇವರಿಗೆ ತಾತ್ಕಾಲಿಕ ಅನುಮೋದನೆ ನಕ್ಷೆಯ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

7) **ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಚಪ್ಪರದಕಲ್ಲು (ಬೀರಸಂದ್ರ) ದೇವನಹಳ್ಳಿ ತಾಲ್ಲೂಕು-562110 ಇವರಿಗೆ ತಾತ್ಕಾಲಿಕ ಅನುಮೋದನೆ ನಕ್ಷೆಯ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

8) **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಿಲ್ಲಾ ಪಂಚಾಯತ್, ದೇವನಹಳ್ಳಿ** ಇವರಿಗೆ ತಾತ್ಕಾಲಿಕ ಅನುಮೋದನೆ ನಕ್ಷೆಯ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

9) **ಹಿರಿಯ ಪರಿಸರಾಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ,** 'ಪರಿಸರ ಭವನ', 1 ರಿಂದ 5 ನೇ ಮಹಡಿಗಳು, ನಂ 49, ಚರ್ಚ್ ಸ್ಟ್ರೀಟ್, ಬೆಂಗಳೂರು-560001 ಇವರಿಗೆ ತಾತ್ಕಾಲಿಕ ಅನುಮೋದನೆ ನಕ್ಷೆಯ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

10) **ಕಛೇರಿ ಪ್ರತಿ.**

8.2.2022

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

Housiey.com